ವರ್ಗಕ್ಕೂ ಸೇರಿದುದಲ್ಲ. ಅದು ಯಾವಾಗಲೂ ಇರುವಂತಹುದು, ಯಾವ ಬದಲಾವಣೆಗೂ ಒಳಗಾಗದುದು, ಮತ್ತು ಎಲ್ಲೆಲ್ಲಿಯೂ ಇರುವಂತಹುದು. ಆದ್ದರಿಂದ ಈ ನಾಲ್ಕು ಬಗೆಯ ಕ್ರಿಯೆಗಳು ಅದಕ್ಕೆ ಅನ್ವಯವಾಗುವುದೇ ಇಲ್ಲ. ಆದ್ದರಿಂದ ಸಾಧಕನು **ನಾಸ್ತಿ ಅಕೃತಃ ಕೃತೇನ** – "ಕರ್ಮದಿಂದ ಕರ್ಮೋತ್ಪನ್ನವಲ್ಲದುದನ್ನು ಪಡೆಯಲಾಗುವುದಿಲ್ಲ" (ಮುಂಡಕೋಪನಿಷತ್. ೧ : ೨: ೧೨) ಎಂದು ತೀರ್ಮಾನಿಸಿ ವೈರಾಗ್ಯವನ್ನು ಪಡೆಯುತ್ತಾನೆ, ಕರ್ಮತ್ಯಾಗ ಮಾಡುತ್ತಾನೆ.

ಆತ್ಮವೆನ್ನುವುದು ಕರ್ಮೋತ್ಪನ್ನವಲ್ಲ, ಅದನ್ನು ಪಡೆಯುವುದಕ್ಕೆ ಇರುವ ಅಡಚಣೆಗಳನ್ನು ಕರ್ಮದಿಂದ ನಿವಾರಿಸಬಹುದು, ಅಷ್ಟೇ. ದೀಪಕ್ಕಿರುವ ಆವರಣವನ್ನು ತೆಗೆದರೆ ದೀಪ ಪ್ರಕಾಶಿಸುತ್ತದೆ. ಆವರಣವನ್ನು ತೆಗೆಯುವ ಕ್ರಿಯೆಯಿಂದ ದೀಪದಲ್ಲೇನೂ ಬದಲಾವಣೆಯುಂಟಾಗುವುದಿಲ್ಲ, ಅದು ತನ್ನ ಪಾಡಿಗೆ ತಾನು ಪ್ರಕಾಶಿಸುತ್ತಿರುತ್ತದೆ. ಕರ್ಮ ಆವರಣವನ್ನು ತೆಗೆಯುವುದಕ್ಕೆ ಮಾತ್ರ. ಕರ್ಮದಿಂದ ನಿಜವಾಗಿಯೂ ಯಾವುದೇ ಹೊಸದನ್ನೂ ಪಡೆಯಲಾಗುವುದಿಲ್ಲ; ಇರುವುದರಲ್ಲಿ ಬದಲಾವಣೆಯನ್ನುಂಟು ಮಾಡಬಹುದು, ಅಷ್ಟೇ. ಒಂದು ಮಡಕೆಯನ್ನು ಉತ್ಪಾದಿಸುವುದೆಂದರೆ ಮಣ್ಣಿನ ರೂಪವನ್ನು ಮಡಕೆಯ ರೂಪವಾಗಿ ಪರಿವರ್ತಿಸುವುದು, ಅಷ್ಟೇ.

ಆದರೆ ಆತ್ಮವು ಅಭೌತಿಕವಾದುದರಿಂದ ಅದಕ್ಕೆ ಕರ್ಮದ ಸ್ಪರ್ಶವೇ ಇಲ್ಲ. ಆದ್ದರಿಂದಲೇ ಕರ್ಮ ಮತ್ತು ಜ್ಞಾನಗಳ ಸಮುಚ್ಚಯವನ್ನು ಶ್ರೀಶಂಕರಾಚಾರ್ಯರು ಖಂಡಿಸುತ್ತಾರೆ. ಅವರ ಪ್ರಕಾರ ಕರ್ಮವು ಪರೋಕ್ಷವಾಗಿ ಜ್ಞಾನಕ್ಕೆ ಸಾಧನವಾಗಬಲ್ಲುದೇ ವಿನಾ ನೇರವಾದ ಸಾಧನವಲ್ಲ. **ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ** – "ಕರ್ಮದಿಂದ ಚಿತ್ತಶುದ್ಧಿಯಾಗುವುದೇ ಹೊರತು ಆತ್ಮವಸ್ತುವನ್ನು ಪಡೆಯಲಾಗುವುದಿಲ್ಲ" ಎಂದು ಅವರು ಹೇಳುತ್ತಾರೆ (ವಿವೇಕ ಚೂಡಾಮಣಿ, ೧೧). ಕರ್ಮವೆಂದರೆ ಕ್ರಿಯೆ, ಕಾರಕ, ಫಲ ಮುಂತಾದ ಭೇದಗಳಿಂದ ಕೂಡಿರುವಂತಹುದು; ಭೇದದಿಂದ ಅಭೇದವನ್ನು ಪಡೆಯಲು ಹೇಗೆ ಸಾಧ್ಯ ಎಂದು ಅವರು ಕೇಳುತ್ತಾರೆ. ಮಣ್ಣಿನ ಕೊಳೆಯನ್ನು ಮಣ್ಣಿನಿಂದ ತೊಳೆಯಲು ಸಾಧ್ಯವೇ? ಕತ್ತಲೆಯಲ್ಲಿ ಬೆಳಕನ್ನು ಕಾಣಲು ಸಾಧ್ಯವೇ? ಒಂದು ಗಾಢ ಕತ್ತಲೆಯ ಕೋಣೆಯಲ್ಲಿ ದೀಪ ಉರಿಯುತ್ತಿದ್ದರೆ ಆ ದೀಪ ಕಾಣುವುದು ಅದರ ಬೆಳಕಿನಿಂದಲೇ ಹೊರತು ಕತ್ತಲೆಯಿಂದಲ್ಲ. ಹಾಗೆಯೇ ಆತ್ಮದ ಬೆಳಕಿನಿಂದ ಮಾತ್ರ ಆತ್ಮವನ್ನು ನೋಡಬಹುದೇ ಹೊರತು ಕರ್ಮದಿಂದಲ್ಲ.

ಗೀತೆಯ ಮೂರನೆಯ ಅಧ್ಯಾಯದ ಪೀಠಿಕೆಯಲ್ಲಿ ಶಂಕರಾಚಾರ್ಯರು ಹೇಳುತ್ತಾರೆ: **ಮೋಕ್ಷಸ್ಯ ಅಕಾರ್ಯತ್ವಾದ್ ಮುಮುಕ್ಷೋಃ ಕರ್ಮ ಆನರ್ಥಕ್ಯಂ ।** – "ಮೋಕ್ಷವು ಕರ್ಮದ ಪರಿಣಾಮವಲ್ಲವಾದುದರಿಂದ ಮುಮುಕ್ಷುವಿನ ಪಾಲಿಗೆ ಕರ್ಮವು ಅನರ್ಥಕ." ಮೋಕ್ಷವೆಂದರೆ ದೇಹೇಂದ್ರಿಯಮನಸ್ಸುಗಳಿಂದ ಬಿಡುಗಡೆ. ದೇಹೇಂದ್ರಿಯಮನಸ್ಸುಗಳು ಪ್ರಕೃತಿಯ ಉತ್ಪನ್ನಗಳಾದುದರಿಂದ ಅವು ಯಾವಾಗಲೂ ಕ್ರಿಯಾಶೀಲವಾಗಿಯೇ ಇರುತ್ತವೆ. ವ್ಯಕ್ತಿಯು ನಿಷ್ಕ್ರಿಯನಾಗಿರುವಾಗಲೂ ಅವು ಕಾರ್ಯನಿರತವಾಗಿರುತ್ತವೆ. ಇವುಗಳ ವಿಷಯದಲ್ಲಿ ನಿಷ್ಕ್ರಿಯವೆಂಬುದಕ್ಕೆ ಅರ್ಥವೇ ಇಲ್ಲ, ಅಥವಾ 'ನಿಷ್ಕ್ರಿಯ' ಎಂದರೆ ಬೇರೆ ರೀತಿಯ ಕ್ರಿಯೆ ಎಂದೂ ಹೇಳಬಹುದು. ಕ್ರಿಯಾಂತರ ಸಾಧ್ಯವೇ ಹೊರತು ನಿಷ್ಕ್ರಿಯೆ ಸಾಧ್ಯವಿಲ್ಲ. ಆದ್ದರಿಂದ 'ಮೋಕ್ಷವೆಂದರೆ ಕರ್ಮದಿಂದ ಬಿಡುಗಡೆ' ಎಂದೇ ಅರ್ಥ. ಆದ್ದರಿಂದ ಮೋಕ್ಷವು ಕರ್ಮದ ಪರಿಣಾಮವಲ್ಲ, ಅಕರ್ಮದ ಸ್ಥಿತಿ, ಕರ್ತೃತ್ವಭಾವದಿಂದ ಮುಕ್ತವಾಗುವುದು ಎಂದರ್ಥ. ಮೊಲವು ಸಿಂಹದ ಮರಿಯನ್ನು ಹೆರಲಾಗದಿರುವಂತೆ ಕರ್ಮದಿಂದ ಮೋಕ್ಷ ಅಸಾಧ್ಯ ಎಂದು 'ಸ್ವಾರಾಜ್ಯಸಿದ್ಧಿ' ಯಲ್ಲಿ ಉಕ್ತವಾಗಿದೆ.

ನಿಷ್ಕಾಮ ಕರ್ಮ, ಶಾಸ್ತ್ರಾಧ್ಯಯನ, ಯಮ–ನಿಯಮಾದಿ ನೈತಿಕಶಿಸ್ತು ಮುಂತಾದವುಗಳ ಮೂಲಕ ಮನಸ್ಸು ಸಾಕಷ್ಟು ಪರಿಶುದ್ಧವಾಗಿ ಧ್ಯಾನಜೀವನವನ್ನು ಅನುಸರಿಸುವುದಕ್ಕೆ ಪಕ್ವವಾಗುತ್ತದೆ. ಆಗ ಶ್ರೀರಾಮಕೃಷ್ಣರು ಹೇಳುವಂತೆ ಕರ್ಮ ತಾನಾಗಿಯೇ ಬಿದ್ದುಹೋಗುತ್ತದೆ. ದೇಹಧಾರಣೆಗೆ ಬೇಕಾಗುವಷ್ಟು ಮಾತ್ರ ಕರ್ಮವನ್ನು ಮಾಡುತ್ತ, ಸಾಧಕನು ಸಂಪೂರ್ಣ ಧ್ಯಾನಜೀವನಕ್ಕೆ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಇದನ್ನೇ ಶ್ರೀಕೃಷ್ಣನು ಆರನೆಯ ಅಧ್ಯಾಯದಲ್ಲಿ ಹೇಳುತ್ತಾನೆ:

**ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।**
**ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ॥ (೬ : ೩)**

"ಯೋಗವನ್ನು ಹೊಂದಬೇಕೆಂದು ಇಚ್ಛಿಸುವ ಮುನಿಗೆ ಕರ್ಮವು ಸಾಧನವೆಂದು ಹೇಳಲ್ಪಡುತ್ತದೆ. ಯೋಗಾರೂಢನಾದ ಅದೇ ಮುನಿಗೆ ಕರ್ಮಪರಿತ್ಯಾಗವು ಸಾಧನವೆಂದು ಹೇಳಲ್ಪಡುತ್ತದೆ." ಇನ್ನೊಂದು ಕಡೆ ಶ್ರೀಕೃಷ್ಣನು, **ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ** – "ಎಲ್ಲ ಕರ್ಮಗಳೂ ಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತವೆ" (೪ : ೩೩) ಎಂದು ಹೇಳುತ್ತಾನೆ.

ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ, ಆತ್ಮಜ್ಞಾನಕ್ಕೆ ಮುಖ್ಯವಾದ ಅಡಚಣೆ ಅಜ್ಞಾನ. ಈ ಅಜ್ಞಾನವನ್ನು ಜ್ಞಾನದಿಂದ ಮಾತ್ರ ಹೋಗಲಾಡಿಸಲು ಸಾಧ್ಯ, ಕರ್ಮದಿಂದಲ್ಲ. ಕರ್ಮದಿಂದ ಅನೇಕ ವಸ್ತುಗಳನ್ನು ನಾಶಮಾಡಬಹುದು, ಅಜ್ಞಾನವನ್ನು ನಾಶ ಮಾಡಲಾಗುವುದಿಲ್ಲ. ಅಜ್ಞಾನವು ಇರುವ ಒಂದು ವಸ್ತುವಾಗಿದ್ದಿದ್ದರೆ, ಅದನ್ನು ಕರ್ಮದಿಂದ ನಾಶಪಡಿಸಬಹುದಿತ್ತು. ಅಜ್ಞಾನವು ಭಾವಾತ್ಮಕ ಸತ್ಯವಲ್ಲ, ಅಭಾವಾತ್ಮಕ ಸತ್ಯ. ಅಜ್ಞಾನವೆಂದರೆ ಜ್ಞಾನದ ಅಭಾವ – ಕತ್ತಲೆಯು ಬೆಳಕಿನ ಅಭಾವವಾಗಿರುವಂತೆ. ಕತ್ತಲೆಯನ್ನು ಹೋಗಲಾಡಿಸಲು ಬೆಳಕೇ ಬೇಕು. ಅದನ್ನು ಯಾವುದೇ ಕ್ರಿಯೆಯಿಂದ ನಾಶ ಮಾಡಲಾಗುವುದಿಲ್ಲ. ಹಾಗೆಯೇ ಅಜ್ಞಾನವು ಜ್ಞಾನದಿಂದ ಮಾತ್ರ ನಾಶವಾಗುತ್ತದೆ, ಕರ್ಮದಿಂದಲ್ಲ. ಹಗ್ಗದ ಜ್ಞಾನದಿಂದ ಮಾತ್ರವೇ ಹಾವು ನಾಶವಾಗುತ್ತದೆಯೇ ಹೊರತು, ದೊಣ್ಣೆಯಿಂದ ಹೊಡೆಯುವುದರಿಂದಲ್ಲ. ಶುಕ್ತಿಯ (ಕಪ್ಪೆಚಿಪ್ಪು) ಜ್ಞಾನದಿಂದ ಮಾತ್ರವೇ ರಜತ (ಬೆಳ್ಳಿ) ಹೊರಟುಹೋಗುತ್ತದೆ. ಆದ್ದರಿಂದ ಕರ್ಮವು ಜ್ಞಾನಕ್ಕೆ ಪರೋಕ್ಷ ಸಾಧನವೇ ಹೊರತು ಅಪರೋಕ್ಷ ಸಾಧನವಲ್ಲ.

(ಮುಂದುವರಿಯುವುದು)